# ನವನವೀನ ನೈಟ್‌ವೇರ್








ಕಚೇರಿಗೆ ಅಥವಾ ಸಭೆ ಸಮಾರಂಭಗಳಿಗೆ ಹೋಗುವಾಗ ಎಷ್ಟೇ ಭರ್ಜರಿ ತಯಾರಿ ಮಾಡಿಕೊಂಡು ಹೋದರೂ, ಸಾವಿರಾರು– ಲಕ್ಷಾಂತರ ರೂಪಾಯಿ ಬೆಲೆ ಬಾಳುವ ದಿರಿಸು ಧರಿಸಿ ಮಿಂಚುತ್ತಿದ್ದರೂ, ಮನೆಗೆ ಬಂದ ನಂತರ ಅದನ್ನು ಕಳಚಿ ನೈಟ್ ಡ್ರೆಸ್ ಅಥವಾ ನೈಟಿ ಹಾಕಿಕೊಂಡರಷ್ಟೇ ಮನಸ್ಸಿಗೆ ನೆಮ್ಮದಿ, 'ಅಬ್ಬಾ!' ಎಂದು ನೆಮ್ಮದಿಯ ಉಸಿರು ಬಿಡುತ್ತೇವೆ. ಕೊನೆಯ ಪಕ್ಷ ಮಲಗುವ ವೇಳೆಗಾದರೂ ಈ ದಿರಿಸು ಇದ್ದರೇನೇ ಆರಾಮದಾಯಕ ನಿದ್ದೆ ಬರುತ್ತದೆ.

ಮೇಲಿಂದ ಕೆಳಗಿನವರೆಗೆ ಒಂದೇ ಡ್ರೆಸ್ ಆಗಿದ್ದರೆ ನೈಟಿ ಎಂದೂ, ಪೈಜಾಮ ಹಾಗೂ ಮೇಲೊಂದು ಟಾಪ್ ಇದ್ದರೆ ಅದನ್ನು ಸಾಮಾನ್ಯವಾಗಿ ನೈಟ್‌ವೇರ್ , ನೈಟ್‌ಸೂಟ್ ಎಂದೂ ಹೇಳುತ್ತೇವೆ. ಅದೇನೇ ಇದ್ದರೂ ಈ ದಿರಿಸನ್ನು ಆರಂಭದಲ್ಲಿ ವಿನ್ಯಾಸಗೊಳಿಸಿದ್ದರ ಉದ್ದೇಶ ರಾತ್ರಿ ಮಾತ್ರ ಧರಿಸಲು. ಅದಕ್ಕಾಗಿಯೇ ಅದನ್ನು 'ನೈಟ್‌ವೇರ್' ಎಂದು ಹೆಸರು ಇಡಲಾಯಿತು.

ಆದರೆ ಇದೀಗ ರಾತ್ರಿಗೆ ಮಾತ್ರ ಈ ಡ್ರೆಸ್ ಸೀಮಿತವಾಗಿಲ್ಲ. ದಿನಪೂರ್ತಿ ಇದನ್ನು ಹಾಕಿಕೊಂಡು ಮನೆಯಲ್ಲಿ ಇರುವ ಮಹಿಳೆಯರೇ ಹೆಚ್ಚು ಮಂದಿ. ಹೆಚ್ಚಿನ ಮಹಿಳೆಯರು ನೈಟಿ ಮೇಲೊಂದು ಶಾಲ್ ಇಲ್ಲವೇ ಚಳಿಯಿದ್ದರೆ ಮೇಲೊಂದು ಸ್ವೆಟ್ಟರ್ ಹಾಕಿಕೊಂಡು ಸಮೀಪದ ಅಂಗಡಿಗಳಿಗೆ, ಮಾರುಕಟ್ಟೆಗೆ ಹೋಗಿ ಬರುವುದಂತೂ ನಿಂತಿಲ್ಲ. ಅದಕ್ಕಾಗಿಯೇ ಕಚೇರಿ, ಸಭೆ ಸಮಾರಂಭ ಬಿಟ್ಟು ಹೆಚ್ಚಿನ ವೇಳೆ ಮಹಿಳೆಯರ ಸಂಗಾತಿ ಆಗಿರುವುದು ನೈಟ್‌ದಿರಿಸಿನ ಇನ್ನೊಂದು ವಿಶೇಷ.

ಅನೇಕ ಮಹಿಳೆಯರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನೈಟಿಯಿಂದ ಕೆಂಗಣ್ಣಿಗೆ ಗುರಿಯಾಗಿದ್ದೂ ಇದೆ. ಶಾಲೆಗೆ ಮಕ್ಕಳನ್ನು ಕಳಿಸುವಾಗ ನೈಟಿ ಕಳಚಿ ಬೇರೆ ಡ್ರೆಸ್ ಹಾಕಿಕೊಳ್ಳುವುದು ಯಾಕಪ್ಪ ಎಂದುಕೊಂಡು ಬೆಂಗಳೂರಿನ ಶಾಲೆಯೊಂದರಲ್ಲಿ ನೈಟಿ ಮೇಲೆಯೇ ಹೋದ ಮಹಿಳೆಯರನ್ನು ಕಂಡು ಅಲ್ಲಿಯ ಪ್ರಾಂಶುಪಾಲರು ಕೆಂಡಾಮಂಡಲ ಆಗಿದ್ದಾರೆ. 'ಇನ್ನು ಮುಂದೆ ನೈಟಿ ಧರಿಸಿ ಮಕ್ಕಳನ್ನು ಬಿಡಲು ಬರುವಂತಿಲ್ಲ' ಎಂದೂ ಅವರು ಆಜ್ಞೆಯನ್ನೂ ನೀಡಿಬಿಟ್ಟಿದ್ದಾರೆ!

ಅದೇನೇ ಇದ್ದರೂ ನೈಟಿ ಮಾತ್ರ ಯಾರನ್ನು 'ಕ್ಯಾರೇ' ಎನ್ನದೇ ತನ್ನ ಸ್ಥಾನ ಬಿಗಿ ಮಾಡಿಕೊಂಡಿದೆ. ಅದೇ ನೈಟಿಯ ಮಹಿಮೆ. ಇದಕ್ಕಾಗಿಯೇ ಫ್ಯಾಷನ್ ಪ್ರಪಂಚದಲ್ಲಿ ಈ ಸ್ಲೀಪ್‌ವೇರ್ ಮಹತ್ವದ ಸ್ಥಾನ ಪಡೆದುಕೊಂಡಿದೆ. ಮನೆಯಲ್ಲಿ ಹಾಕುವ ದಿರಿಸು ಹೇಗಿದ್ದರೇನು ಎಂದುಕೊಳ್ಳುವ ಜಾಯಮಾನ ಈಗಿನ ಹೆಣ್ಣುಮಕ್ಕಳದ್ದಾಗಲೀ, ಗೃಹಿಣಿಯರದ್ದಾಗಲೀ ಅಲ್ಲ. ಮನೆಯಲ್ಲಿ ಇರುವಾಗಲೂ ಟಿಪ್‌ಟಾಪ್ ಆಗಿರಬೇಕು, ನೈಟಿ ಧರಿಸಿದರೂ ಅದರಲ್ಲಿಯೂ ಸುಂದರಿಯಾಗಿ ಕಾಣಬೇಕು ಎನ್ನುವ ಮಹಿಳೆಯರು, ಅದನ್ನು ಖರೀದಿಸುವಾಗಲೂ ಬೇರೆ ಡ್ರೆಸ್‌ನಂತೆಯೇ ನೂತನ ವಿನ್ಯಾಸ, ಹೊಸ ಲುಕ್ ನೀಡುವ ನೈಟಿಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ.

ನೈಟಿಯನ್ನು ಆರಾಮಾಗಿ ಧರಿಸಿಕೊಳ್ಳಬಹುದು. ಸೀರೆಯಂತೆ ಪದೇ ಪದೇ ಸರಿಪಡಿಸಿಕೊಳ್ಳುತ್ತಾ ಇರಬೇಕು ತಲೆ ಬಿಸಿ ಇಲ್ಲ. ಇಸ್ತ್ರಿ ಗಿಸ್ತ್ರಿ ಮಾಡುವುದೂ ಬೇಕಿಲ್ಲ. ತೊಳೆಯುವುದೂ ಬಹಳ ಸುಲಭ. ಇದನ್ನೇ ಗಮನದಲ್ಲಿಟ್ಟುಕೊಂಡು ಈ ಮೂಲ ಉದ್ದೇಶಕ್ಕೆ ಧಕ್ಕೆ ಆಗದಂತೆ ಹೊಸಹೊಸ ರೂಪದ, ಆಕರ್ಷಕ ಡಿಸೈನ್‌ಗಳಲ್ಲಿ ಅದೀಗ ಮಾರುಕಟ್ಟೆ ಲಗ್ಗೆ ಇಟ್ಟಿವೆ.

ನೈಟ್‌ವೇರ್ ಬಗ್ಗೆ ಹೇಳುವುದಾದರೆ, ಮಹಿಳೆಯರ ನೈಟ್ ಪ್ಯಾಂಟ್‌ಗಳಲ್ಲಿ ಬೆಲ್‌ಬಾಟಮ್ ಕಾಟನ್ ಪ್ಯಾಂಟ್‌ಗಳೇ ಹಲವು ವರ್ಷಗಳಿಂದ ಚಾಲ್ತಿಯಲ್ಲಿದ್ದವು. ಆದರೆ ಇದೀಗ ಅದು ಕೂಡ ಹೊಸರೂಪ ಪಡೆದುಕೊಂಡಿದೆ.

ಸಿಲ್ಕ್ ನೈಟ್‌ವೇರ್, ಪ್ರಿಂಟೆಡ್ ನೈಟ್‌ವೇರ್, ಎಂಬ್ರಾಯಿಡರಿ ಡಿಸೈನ್ ನೈಟಿ, ಪ್ಯಾಚ್ ವರ್ಕ್ ನೈಟ್‌ವೇರ್, ಬ್ರೋಕೆಡ್ ನೈಟಿ, ಮಿರರ್ ಪ್ಯಾಚ್ ನೈಟ್‌ವೇರ್, ಜಾರ್ಜೆಟ್ ನೈಟಿ, ಅನಾರ್ಕಲಿ ನೈಟ್‌ವೇರ್, ಕ್ರಶ್ಡ್ ನೈಟಿ, ನೆಟ್ಟೆಡ್ ನೈಟ್‌ವೇರ್....ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

■ ಸಿಂಚನಾ ಎಸ್.ಎನ್.